ಸದಸ್ಯರ್ಗೈರುಹಾಜರಿಗೆ ಅನುಮತಿ

ಅಧ್ಯಕ್ಷರು.— ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬೆಸಗರಹಳ್ಳಿ ಅಪ್ಪಾಜಿಗೌಡರವರು ದಿನಾಂಕ ೪-೩-೧೯೮೭ ರಿಂದ ೧೫-೩-೧೯೮೭ ರವರೆಗೆ ಸದರಿ ವಿಧಾನ ಸಭೆಯ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿರುತ್ತಾರೆ.

"ಸದನವು ಮಾನ್ಯ ಸದಸ್ಯರಿಗೆ ಗೈರು ಹಾಜರಾಗಲು ಅನುಮತಿಯನ್ನು ನೀಡುತ್ತದೆಯೇ" ?

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಅಧ್ಯಕ್ಷರು.— ಶ್ರೀ ಬೆಸಗರಹಳ್ಳಿ ಅಪ್ಪಾಜಿ ಗೌಡರಿಗೆ ಮೇಲ್ಕಂಡ ದಿನಗಳಂದು ಸಭೆಗೆ ಗೈರು ಹಾಜರಾಗಲು ಅನುಮತಿಯನ್ನು ನೀಡಲಾಗಿದೆ.

ಪ್ರಕಟಣೆ

ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶಗಳು ಬಂದಿವೆ:—

೧) **ಕರ್ನಾಟಕ** ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ೧೧ನೇ ನಿಯಮದ ಮೇರೆಗೆ ವಿಧಾನ ಪರಿಷತ್ತಿನಲ್ಲಿ ದಿನಾಂಕ ೧೨ನೇ ಫೆಬ್ರುವರಿ ೧೯೮೭ ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕಾರವಾದ ೧೯೮೭ನೇ ಇಸವಿಯ ಕರ್ನಾಟಕ ಕಾನೂನ ನಿರವು ಮಂಡಲಿ (ತಿದ್ದುಪಡಿ) ವಿಧೇಯಕವನ್ನು ಕಳುಹಿಸಿಕೊಟ್ಟಿದ್ದೇನೆ.

೨) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ ೧೧ನೇ ನಿಯಮದ ಮೇರೆಗೆ ವಿಧಾನ ಪರಿಷತ್ತಿನಲ್ಲಿ ದಿನಾಂಕ ೬ನೇ ಮಾರ್ಚ್ ೧೯೮೭ ರಂದು ಯಾವುದೇ ತಿದ್ದುಪಡಿಗಳಿಲ್ಲದೇ ಅಂಗೀಕಾರವಾದ ೧೯೮೭ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯತಿಗಳು ಹಾಗೂ ನ್ಯಾಯ ಪಂಚಾಯತಿಗಳು (ತಿದ್ದುಪಡಿ) ವಿಧೇಯಕವನ್ನು ಕಳುಹಿಸುತ್ತಿದ್ದೇನೆ.

ಅಧ್ಯಕ್ಷರು.— ಸದನವು ಈಗ ಮುಕ್ತಾಯಂವಾಗಿ ದಿನಾಂಕ ೯-೩-೧೯೮೭ರ ಸೋಮವಾರ ಬೆಳಿಗ್ಗೆ ೧೧-೦೦ ಗಂಟೆಗೆ ಮತ್ತೆ ಸಮಾವೇಶಗೊಳ್ಳುವುದು.

ಸಭೆಯು-೪-೪೮ಕ್ಕೆ ಮುಕ್ತಾಯವಾಗಿ ಪುನಃ ತಾ. ೯-೩-೮೭ ರಂದು ಸೋಮವಾರ ಬೆಳಿಗ್ಗೆ ೧೧-೦೦ ಗಂಟೆಗೆ ಸೇರಲು ನಿಶ್ಚಯಿಸಿತು.